**ಸಿರಿಕನ್ನಡ**

**10ನೇತರಗತಿ**

# ಸಂಧಿಗಳು




$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$$


**ಪ್ರಯತ್ನ**

**ಬಸವರಾಜ.ಟಿ.ಎಂ**

**ಕನ್ನಡ ಭಾಷಾ ಶಿಕ್ಷಕರು**

**ಸರ್ಕಾರಿ ಪ್ರೌಢಶಾಲೆ, ರೂಪನಗುಡಿ**

**ಬಳ್ಳಾರಿ ಪೂರ್ವ ವಲಯ**




# <u>ಸಂಧಿಗಳು</u>

**ಎರಡು ಅಕ್ಷರಗಳು ಪರಸ್ಪರ ಕಾಲ ವಿಳಂಬವಿಲ್ಲದೆ ಕೂಡಿಕೊಳ್ಳುವುದು 'ಸಂಧಿ'ಎಂದು ಅರ್ಥ**

**ಎರಡು ವರ್ಣಗಳು (ಅಕ್ಷರಗಳು) ಕಾಲವಿಳಂಬವಿಲ್ಲದಂತೆ ಸೇರುವುದೇ ಸಂಧಿ0ುನಿಸುವುದು.**

* ಸ್ವರದ ಮುಂದೆ ಸ್ವರ ಬಂದು ಹೀಗೆ ಸಂಧಿ0ುಾದರೆ ಸ್ವರಸಂಧಿ ಎನ್ನುತ್ತೇವೆ.
* ಸ್ವರದ ಮುಂದೆ ವ್ಯಂಜನ ಬಂದು ಅಥವಾ ವ್ಯಂಜನದ ಮುಂದೆ ವ್ಯಂಜನ ಬಂದು ಸಂಧಿ0ುಾದರೆ ವ್ಯಂಜನಸಂಧಿ ಎನ್ನುತ್ತೇವೆ.

## ಕನ್ನಡ ಸಂಧಿಗಳು

### 1. ಲೋಪಸಂಧಿ

**ಎರಡು ಪದಗಳನ್ನು ಕೂಡಿಸುವಾಗ ಪೂರ್ವ ಪದದ ಅಂತ್ಯಕ್ಷರದಲ್ಲಿನ ಸ್ವರವು ಲೋಪವಾಗುವುದು ಪೂರ್ವ ಪದದ ಅಂತ್ಯಕ್ಷರಕ್ಕೆ ಉತ್ತರ ಪದದ ಆದಿಯಲ್ಲಿನ ಸ್ವರ ಸೇರಿಕೊಳ್ಳುವುದು**

(ಸ್ವರದ ಮುಂದೆ ಸ್ವರವು ಬಂದು ಸಂಧಿ0ುಾಗುವಾಗ ಪೂರ್ವ ಪದದ ಅಂತ್ಯಕ್ಷರದಲ್ಲಿನ ಸ್ವರವು ಲೋಪವಾಗುವುದು ಲೋಪಸಂಧಿ (ಅರ್ಥವು ಕೆಡದಿದ್ದ ಪಕ್ಷದಲ್ಲಿ ಮಾತ್ರ ಲೋಪವಾಗುವುದು) )

ಉದಾಹರಣೆಗೆ:–

ಊರು + ಅಲ್ಲಿ = ಊರಲ್ಲಿ

(ಉ + ಅ) (ಉಕಾರ ಲೋಪ)

ಪೂರ್ವಪದದ ಅಂತ್ಯದಕ್ಷರ "ರು" ಈ ಅಕ್ಷರದ ಅಂತ್ಯದಲ್ಲಿರುವ "ಉ" ಸ್ವರ ಲೋಪ ಆಗಿ ಉತ್ತರ ಪದದ ಆದಿ ಸ್ವರ "ಅ" ಸೇರಿಕೊಂಡು " ರ " ಆಗಿದೆ

| ಲೋಪ ಸಂಧಿ | | |
|---|---|---|
| **ಊರೂರು** | **ಸಂಪನ್ನರಾದ** | **ಪೊಳ್ದಡೆ** |
| **ಬಲ್ಲೆನೆಂದು** | **ಆದನೆಂಬ** | **ತೆರೆದಿಕ್ಕುವ** |

| | | |
|---|---|---|
| | | |
| ಮಾತಂತು | ನೆತ್ತರೊಂದೆ | ಮನದೊಳಗೆ |
| ಕಾಣಲಾಗದು | ತಪ್ಪಲೀಯದೆ | ಇರುಳಳಿದು |
| ಚರಿಸುತದ್ವರದ | ಲೇಖನವನೋದಿ | ತೆಗೆದುತ್ತರೀಯಮಂ |
| ಬೇಡಬೇಡರಸುಗಳ | ನಿಂತಿರ್ದನು | ಜೀವತೆತ್ತವರು |

ಊರು+ಊರು , ಸಂಪನ್ನರು+ಆದ , ಪೂಳ್ದು+ಎಡೆ , ಬಲ್ಲೆನು+ಎಂದು ,ಆದನು+ಎಂಬ ತೆರೆದು+ಇಕ್ಕುವ , ಮಾತು+ಅಂತು , ನೆತ್ತರು+ ಒಂದೆ , ಮನದ+ ಒಳಗೆ ಕಾಣಲು+ಆಗದು ,ತಪ್ಪಲು+ಈಯದೆ ,ಇರುಳು+ಅಳಿದು ,ಚರಿಸುತ+ಅದ್ವರದ, ಲೇಖನವನು+ಓದಿ , ತೆಗೆದು+ಉತ್ತರೀಯಮಂ ,ಬೇಡಬೇಡ+ಅರಸುಗಳ ,ನಿಂತು+ಇರ್ದನು ಜೀವತೆತ್ತ+ಅವರು

## 2. ಆಗಮ ಸಂಧಿ

**ಎರಡು ಪದಗಳನ್ನು ಕೂಡಿಸುವಾಗ ಪೂರ್ವ ಪದದ ಅಂತ್ಯಕ್ಷರದಲ್ಲಿನ ಸ್ವರವು ಲೋಪವಾಗಿ ಪೂರ್ವ ಪದದ ಅಂತ್ಯಕ್ಷರಕ್ಕೆ ಉತ್ತರ ಪದದ ಆದಿಯಲ್ಲಿನ ಸ್ವರ ಸೇರಿಕೊಂಡಾಗ ಅರ್ಥವು ಕೆಡುವಂತಿದ್ದಲ್ಲಿ 0ಯಕಾರವನ್ನೋ ಅಥವಾ ವಕಾರವನ್ನೋ ಹೊಸದಾಗಿ ಸೇರಿಸಿಕೊಳ್ಳಬೇಕು.**

(ಸ್ವರದ ಮುಂದೆ ಸ್ವರವು ಬಂದಾಗ ಲೋಪಸಂಧಿ ಮಾಡಿದರೆ ಅರ್ಥವು ಕೆಡುವಂತಿದ್ದಲ್ಲಿ ಆ ಎರಡು ಸ್ವರಗಳ ಮಧ್ಯದಲ್ಲಿ 0ಯಕಾರವನ್ನೋ ಅಥವಾ ವಕಾರವನ್ನೋ ಹೊಸದಾಗಿ ಸೇರಿಸಿ ಹೇಳುತ್ತೇವೆ. ಇದಕ್ಕೆ **'ಆಗಮ ಸಂಧಿ'** ಎನ್ನುವರು)

| ಆಗಮ ಸಂಧಿ | |
|---|---|
| ಕೈಯನ್ನು | ಮರವನ್ನು |
| ಮಳೆಯಿಂದ | ಮಗುವಿಗೆ |
| ಶಾಲೆಯಲ್ಲಿ | ಮನೆಯೊಳಗೆ |

| | |
|---|---|
| | |
| **ಭೇದವಿಲ್ಲ** | **ಕೈವಿಡಿದು** |
| **ವೃದ್ಧಿಯಾಗಿ** | **ಭೇದವಾಗಿ** |
| **ಶವವಾದವು** | |

ಕೈ + ಅನ್ನು , ಮರ+ ಅನ್ನು , ಮಳೆ+ಇಂದ , ಮಗು+ಇಗೆ , ಶಾಲೆ+ಅಲ್ಲಿ , ಮನೆ+ಒಳಗೆ ,ಭೇದ+ಇಲ್ಲ ,ಕೈ+ಇಡಿದು ,ವೃದ್ಧಿ+ಆಗಿ ,ಭೇದ+ಆಗಿ ,ಶವ+ಆದವು

ಕೈ + ಅನ್ನು = ಕೈ + 0ಯ್ + ಅನ್ನು = ಕೈ0ಯನ್ನು ,

(ಕೈ+ಅನ್ನು ಕೂಡಿಸಿಗಾಗ ಕೈನ್ನು ಆಗುತ್ತದೆ. ಆದರೆ ಇದರ ಅರ್ಥ ಕೆಡುತ್ತದೆ. ಹಾಗೆ ಮಾಡದೆ "ಯ್ " ಅಕ್ಷರವನ್ನು ಹೊಸದಾಗಿ ಸೇರಿಸಬೇಕು.)

ಮಳೆ + ಇಂದ = ಮಳೆ + 0ಯ್ + ಇಂದ = ಮಳೆಯಿಂದ

ಮಗು + ಇಗೆ = ಮಗು + ವ್ + ಇಗೆ = ಮಗುವಿಗೆ

## 3. ಆದೇಶ ಸಂಧಿ

**ಸಂಧಿ0ಯಾಗುವಾಗ ಒಂದು ಅಕ್ಷರದ ಸ್ಥಾನದಲ್ಲಿ (ಸ್ಥಳದಲ್ಲಿ) ಬೇರೊಂದು ಅಕ್ಷರವು ಬರುವುದೇ ಆದೇಶ ಸಂಧಿ0ಯೆನಿಸುವುದು.**

(ಸಾಮಾನ್ಯವಾಗಿ ಉತ್ತರಪದದ ಆದಿ0ಯಲ್ಲಿರುವ ಕ ತ ಪ ವ್ಯಂಜನಗಳಿಗೆ ಕ್ರಮವಾಗಿ ಗ ದ ಬ ವ್ಯಂಜನಗಳು ಆದೇಶವಾಗಿ ಬರುತ್ತವೆ. ಕೆಲವೊಂದು ಸಲ 'ಪ ಬ ಮ ' ಗಳಿಗೆ 'ವ ' ಕಾರ ಆದೇಶವಾಗುತ್ತದೆ. ಸ ಕಾರಕ್ಕೆ ಚ ಜ ಛ ಗಳು ಆದೇಶವಾಗುತ್ತವೆ.)

| **ಆದೇಶ ಸಂಧಿ** | | |
|---|---|---|
| **ಮಳೆಗಾಲ** | **ಕಡುವೆಳ್ತು** | **ಧೃತಿಗೆಟ್ಟು** |
| **ಮೈದೋರು** | **ಮೆಲ್ವಾತು** | **ಪೋಗಲ್ವೇಳ್ಕುಂ** |

| | | |
|---|---|---|
| ಬೆಂಬತ್ತು | ಹೊಸಗಾಲ | ಕೈವಿಡಿದು |
| ಕಂಗೆಟ್ಟು | ಕಂಬನಿ | ಮೈದೊಳೆ |
| ಇಂಚರ | ಬೆಮರ್ವನಿ | ಬೆಟ್ಟದಾವರೆ |

ಮಳೆ + ಕಾಲ , ಕಡು+ಪೆಳ್ತು , ಧೃತಿ+ಕೆಟ್ಟು , ಮೈ+ತೋರು , ಮೇಲ್+ಮಾತು , ಪೋಗಲ್+ಪೇಳ್ಕುಂ , ಬೆನ್+ಪತ್ತು .ಹೊಸ+ಕಾಲ ಕೈ+ಹಿಡಿದು , ಕಣ್ + ಕೆಟ್ಟು , ಕಣ್ + ಪನಿ ಮೈ+ತೊಳೆ ,ಇನ್+ಸರ , ಬೆಮರ್ + ಪನಿ , ಬೆಟ್ಟದ+ತಾವರೆ

## ಸಂಸ್ಕೃತ ಸಂಧಿಗಳು

### ಸಂಸ್ಕೃತ ಸ್ವರ ಸಂಧಿಗಳು

**ಎರಡು ಸಂಸ್ಕೃತ ಶಬ್ದಗಳು ಸೇರಿ ಸಂಧಿ0ಯಾದರೆ ಸಂಸ್ಕೃತ ಸಂಧಿ ಆಗುತ್ತದೆ.**
**ಒಂದು ಸಂಸ್ಕೃತ ಶಬ್ದವು ಕನ್ನಡ ಶಬ್ದೊಡನೆ ಸೇರಿ ಸಂಧಿ0ಯಾದರೆ ಕನ್ನಡ ಸಂದಿ ಆಗುತ್ತದೆ.**

**ಸಂಸ್ಕೃತದಲ್ಲಿ ಸ್ವರಕ್ಕೆ ಸ್ವರ ಪರವಾದಾಗ ಸ್ವರಸಂಧಿಗಳಾಗುತ್ತವೆ.**
**ವ್ಯಂಜನಕ್ಕೆ ವ್ಯಂಜನ ಪರವಾದಾಗ ವ್ಯಂಜನ ಸಂಧಿಗಳಾಗುತ್ತವೆ.**

### 1. ಸವರ್ಣ ದೀರ್ಘ ಸಂಧಿ

**ಸವರ್ಣಸ್ವರಗಳು(ಅಆ,ಇಈ,ಉಊಋೠ)ಒಂದರಮುಂದೆಮತ್ತೊಂದು(ಅ+ಅ,ಅ+ಆ,ಅ+ಅ..ಇ+ಇ) ಬಂದಾಗ ಅವೆರಡರ ಸ್ಥಾನದಲ್ಲಿ ಒಂದೇ ದೀರ್ಘಸ್ವರವು(ಆ,ಈ,ಊ) ಆದೇಶವಾಗಿ ಬರುವುದು ಸವರ್ಣ ದೀರ್ಘಸಂಧಿ.**

ವಿದ್ಯಾ + ಅಭ್ಯಾಸ = ವಿದ್ಯಾಭ್ಯಾಸ
(ಆ + ಅ) = ಆ

ಇಲ್ಲಿ 'ಆ' ಎಂಬ ಸ್ವರದ ಮುಂದೆ 'ಅ' ಎಂಬ ಸ್ವರ ಬಂದಿದೆ. ಈ ಎರಡೂ ಸ್ವರಗಳು ಸವರ್ಣಸ್ವರಗಳು ಇವು ಹೀಗೆ ಒಂದರ ಮುಂದೆ ಒಂದು ಬಂದಿವೆ. ಅವೆರಡೂ ಹೋಗಿ ಅವುಗಳ ಸ್ಥಾನದಲ್ಲಿ ಅದೇ ಸವರ್ಣಗಳ ಒಂದು ದೀರ್ಘಸ್ವರವು ಬಂದಿದೆ.
ಉದಾಹರಣೆಗೆ:–

| ಸವರ್ಣ ದೀರ್ಘ ಸಂಧಿ | | |
|---|---|---|
| ಮಹಾತ್ಮ | ವಧೂಪೇತ | ಸಕಳಾಚಾರ್ಯ |
| ಗಿರೀಶ | ನಿಜಾಶ್ರಮ | ಚಂದ್ರಾರ್ಕ |
| ಸುರಾಸುರ | ಜಿನಾಲಯ | ಲಕ್ಷ್ಮೀಶ |
| ಕಾದಾಟದಾಟ | | |

ಮಹಾ + ಆತ್ಮಾ , ವಧೂ+ಉಪೇತ , ಸಕಳ+ಆಚಾರ್ಯ ,ಗಿರಿ+ಈಶ ,ನಿಜ+ಆಶ್ರಮ ಚಂದ್ರ+ಅರ್ಕ ,ಸುರ + ಅಸುರ ,ಜಿನ+ಆಲಯ ,ಲಕ್ಷ್ಮಿ+ಈಶ , ಕಾದಾಟದ+ಆಟ

## (2) ಗುಣಸಂಧಿ

**ಅ ಆ ಕಾರಗಳಿಗೆ ಇ ಈ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಏ' ಕಾರವೂ, ಉ ಊ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಓ' ಕಾರವೂ, ಋ ಕಾರ ಪರವಾದರೆ ಅವೆರಡರ ಸ್ಥಾನದಲ್ಲಿ 'ಅರ್' ಕಾರವೂ ಆದೇಶಗಳಾಗಿ ಬರುತ್ತವೆ. ಇದಕ್ಕೆ 'ಗುಣಸಂಧಿ' ಎಂದು ಹೆಸರು.**

| ಗುಣ ಸಂಧಿ | | |
|---|---|---|
| ದೇವೇಂದ್ರ | ಮಹರ್ಷಿ | ಮಂಡಳೇಶ್ವರ |
| ಜ್ಞಾನೇಶ್ವರ | ಮಹೇಶ | ಸೂರ್ಯೋದಯ |
| ಕಲೋಪಾಸಕ | | |

ದೇವ + ಇಂದ್ರ , ಮಹಾ + ಋಷಿ , ಮಂಡಳ + ಈಶ್ವರ ,ಜ್ಞಾನ+ಈಶ್ವರ, ಮಹಾ + ಈಶ ಸೂರ್ಯ + ಉದ0ಯ , ಕಲಾ+ಉಪಾಸಕ

## (3) ವೃದ್ಧಿ ಸಂಧಿ

ಅ ಆ ಕಾರಗಳಿಗೆ ಏ ಐ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಐ' ಕಾರವೂ, ಓ ಔ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಔ' ಕಾರವೂ ಆದೇಶಗಳಾಗಿ ಬರುತ್ತವೆ. ಇದಕ್ಕೆ 'ವೃದ್ಧಿಸಂಧಿ' ಎನ್ನುವರು.

| ವೃದ್ಧಿ ಸಂಧಿ |
|---|
| ಏಕೈಕ |
| ಜನೈಕ್ಯ |
| ವನೌಷಧಿ |
| ಅಷ್ಟೈಶ್ವರ್ಯ |

ಏಕ + ಏಕ ,ಅಷ್ಟ + ಐಶ್ವರ್ಯ ,ವನ + ಔಷಧ , ಜನ + ಐಕ್ಯ

## (4) 0ಯಣ್ ಸಂಧಿ

ಇ, ಈ, ಉ, ಊ, ಋ ಕಾರಗಳಿಗೆ ಸವರ್ಣವಲ್ಲದ ಸ್ವರ ಪರವಾದರೆ ಇ ಈ ಕಾರಗಳಿಗೆ '0ಯ್' ಕಾರವೂ, ಉ ಊ ಕಾರಗಳಿಗೆ 'ವ್' ಕಾರವೂ, ಋ ಕಾರಕ್ಕೆ 'ರ್' (ರೇಫ)ವೂ ಆದೇಶಗಳಾಗಿ ಬರುತ್ತವೆ. ಇದಕ್ಕೆ 0ಯಣ್ ಸಂಧಿ0ಯೆಂದು ಹೆಸರು.

| ಯಣ್ ಸಂಧಿ |
|---|
| ಅತ್ಯವಸರ |
| ಜಾತ್ಯತೀತ |

| |
|---|
| ಕೋಟ್ಯಾಧೀಶ್ವರ |
| ಕೋಟ್ಯಾನುಕೋಟಿ |

ಅತಿ + ಅವಸರ ,ಜಾತಿ + ಅತೀತ, ಕೋಟಿ + ಅಧೀಶ್ವರ ,ಕೋಟಿ+ ಅನುಕೋಟಿ

## ಸಂಸ್ಕೃತ ವ್ಯಂಜನ ಸಂಧಿಗಳು

### (1) ಜಶ್ತ್ವಸಂಧಿ

ಪೂರ್ವಶಬ್ದದ ಕೊನೆ0ುಲ್ಲಿರುವ ಕಚಟತಪ ವ್ಯಂಜನಗಳಿಗೆ 0ಾುವ ವರ್ಣ ಪರವಾದರೂ ಪ್ರಾ0ುಶಃ ಅದೇ ವರ್ಗದ ಮೂರನೆ0ು ವ್ಯಂಜನಾಕ್ಷರಗಳು ಆದೇಶಗಳಾಗಿ ಬರುತ್ತವೆ. ಇದಕ್ಕೆ ಜಶ್ತ್ವಸಂಧಿ0ೆುನ್ನುವರು.

| ಜಶ್ತ್ವ ಸಂಧಿ |
|---|
| ವಾಗ್ದೇವಿ |
| ಅಜಂತ |
| ಷಡಾನನ |
| ದಿಗಂತ |
| ಅಬ್ಧಿ |

ವಾಕ್+ದೇವಿ, ಅಚ್ + ಅಂತ , ಷಟ್+ ಆನನದಿಕ್ + ಅಂತ , ಅಪ್ + ಧಿ

## (2) ಶ್ಚುತ್ವ ಸಂಧಿ

ಸಕಾರ,ತವರ್ಗಾಕ್ಷರಗಳಿಗೆ ಶಕಾರ ಚವರ್ಗಾಕ್ಷರಗಳು ಪರವಾದಾಗ ಸಕಾರಕ್ಕೆ ಶಕಾರವೂ, ತವರ್ಗಕ್ಕೆ ಚವರ್ಗವೂ ಆದೇಶಗಳಾಗಿ ಬರುತ್ತವೆ.

'ಶ್ಚು' ಎಂದರೆ ಶಕಾರ ಚವರ್ಗಾಕ್ಷರಗಳು. (ಶ್=ಶಕಾರ, ಚು=ಚ ಛ ಜ ಝ ಞ) ಇವುಗಳು ಆದೇಶವಾಗಿ ಬರುವುದೇ ಶ್ಚುತ್ವಸಂಧಿ ಎನಿಸುವುದು.

| ಶ್ಚುತ್ವ ಸಂಧಿ |
| --- |
| ಶರಚ್ಚಂದ್ರ |
| ಜಗಜ್ಜ್ಯೋತಿ |
| ಪಯಶ್ಶಯನ |

ಶರತ್ + ಚಂದ್ರ ಜಗತ್ + ಜ್ಯೋತಿ ಪ0ಯಸ್ + ಶ0ಯನ

## (3) ಅನುನಾಸಿಕ ಸಂಧಿ

ವರ್ಗ ಪ್ರಥಮ ವರ್ಣಗಳಿಗೆ 0ಯಾವ ಅನುನಾಸಿಕಾಕ್ಷರ ಪರವಾದರೂ, ಅವುಗಳಿಗೆ ಅಂದರೆ ಕ ಚ ಟ ತ ಪ ವ್ಯಂಜನಗಳಿಗೆ ಕ್ರಮವಾಗಿ ಙ ಞ ಣ ನ ಮ ವ್ಯಂಜನಗಳು ಆದೇಶಗಳಾಗಿ ಬರುತ್ತವೆ.

| ಅನುನಾಸಿಕ |
| --- |
| ಷಣ್ಮುಖ |
| ಸನ್ಮಾನ |

| |
|---|
| **ವಾಙ್ಮಯ** |
| **ಉನ್ಮಾದ** |
| **ತನ್ಮಯ** |
| **ಶ್ರೀಮನ್ಮಹಾ** |

ಷಟ್+ ಮುಖ , ಸತ್ + ಮಾನ ವಾಕ್ + ಮ0ಯ , ಉತ್+ಮಾದ, ತತ್+ಮಯ , ಶ್ರೀಮತ್+ಮಹಾ




**ಶುಭವಾಗಲಿ**